ಎಂಬ ಪದ್ಯದಲ್ಲಿ ಕೊನೆಯ ವಾಕ್ಯ ಮಾತ್ರ ಕೇಳಿಸಿಕೊಂಡು ಅದರ ಅರ್ಥವನ್ನು ನಾವೇ ಪಂಪನ ಔದಾರ್ಯ ಗುಣಪ್ರತೀಕವೆಂದುಕೊಂಡಿದ್ದೇವೆ. ಇನ್ನು ಪಂಪನಿಗೆ ತನ್ನ ಕುಲಗೋತ್ರದ ಬಗ್ಗೆ ಅದೆಷ್ಟು ಹೆಮ್ಮೆಯಿತ್ತೆಂದರೆ, ವಿಕ್ರಮಾರ್ಜುನ ವಿಜಯದ 14ನೇ ಆಶ್ವಾಸದ 42ನೇ ಪದ್ಯದಲ್ಲಿ

**'ನಯಶಾಲಿ ವತ್ಸಗೋತ್ರಶ್ರಯನೀಯನನೇಕ**
**ಶಾಸ್ತ್ರಾರ್ಥ ವಿನಿಶ್ಚ್ಯಯಮತಿ ಕೃತಿ**
**ಮಾಧವ ಸೋಮಯಾಜಿ'**

ಎಂದಿದ್ದಾನೆ. ಅಂದರೆ ತನ್ನ ಪೂರ್ವಜರು ಎಂಥ ಪ್ರಕಾಂಡ ವೈದಿಕರಿದ್ದರು ಎಂಬುದು ಇದರ ಅರ್ಥ. ಇಂಥ ವಂಶಪರಂಪರೆಯಲ್ಲಿ ಬರುತ್ತಾ ಆಮೇಲೆ ಇದೇ ವೈದಿಕಧರ್ಮವನ್ನು ತೊರೆದು ಆ ಕಾಲಕ್ಕೆ ಜಿನೇಂದ್ರ ಧರ್ಮವೇ 'ದೊರೆ' ಎನಿಸಿಕೊಂಡಿದ್ದ ಧರ್ಮಕ್ಕೆ ಮತಾಂತರವಾದುದಾಗಿ ಹೇಳಿಕೊಂಡಿದ್ದಾನೆ. ಅಂದರೆ ರಾಷ್ಟ್ರಕೂಟರ ದೊರೆಗಳಿಂದ ಪ್ರಾದುರ್ಭಾವದಲ್ಲಿದ್ದ ಜಿನಧರ್ಮವನ್ನು ಸ್ವೀಕರಿಸುವಲ್ಲಿಯೂ ಅವಕಾಶ ಸಂದರ್ಭ ಇಲ್ಲದಿಲ್ಲ. ಇನ್ನು ಪಂಪ ತನ್ನ ಆಶ್ರಯದಾತ ಅರಿಕೇಸರಿಯ ಆಸ್ಥಾನದಲ್ಲಿ ಜೈನ ವ್ರತಿಯಂತೆ ಇದ್ದುಬಿಟ್ಟನೇ ಎಂದರೆ ಹಾಗೇನೂ ಇಲ್ಲ. ಯುದ್ಧರಂಗದಲ್ಲಿ ಒಬ್ಬೊಬ್ಬ ಸೈನಿಕನ ತಲೆಯನ್ನು ಒಂದೊಂದೇ ಏಟಿಗೆ ಹಾರಿಸುತ್ತಿದ್ದೆ ಎಂಬ ಪರಾಕ್ರಮದ ಮಾತನ್ನಾಡುತ್ತಾನೆ. ಇನ್ನು ಇವನು ಜೈನ ತೀರ್ಥಂಕರರಂತೆ ವೈರಾಗ್ಯಪರನೇ ಎಂದರೆ ಕೇರಳ ಆಂಧ್ರ ಮಲಯ ಯುವತಿಯರ ಒಡ್ಯಾಣ, ಕನ್ನಡಿ, ಕೊರಳಹಾರವಾಗಿ; ಸಂಸಾರವೆಂಬುದು ಅನಂಗಜಂಗಮ ಲತಾ ಲಲಿತಾಂಗಿಯರಿಂದ ಅಲ್ಲವೇ ಎಂದು ಓದುಗರನ್ನು ಬೆಚ್ಚಿ ಬೀಳಿಸುತ್ತಾನೆ. ಇದರ ಜತೆಗೆ ಅರಿಕೇಸರಿ ಇವನ ಕಲಿತನಕ್ಕೆ, ಸತ್ಕವಿತೆಗೆ ಮೆಚ್ಚಿ ಊರುಕೇರಿ ಅಗ್ರಹಾರಗಳನ್ನೂ, ಬಿಡುವೆಣ್ಣುಗಳನ್ನೂ ಧಾರೆಯೆರೆದು ಕೊಟ್ಟಿದ್ದನಂತೆ. ಇನ್ನು ಆ ಅರಿಕೇಸರಿಯೂ ಅದೆಂಥ ಪರಾಕ್ರಮಿ ಅಂದರೆ ಶತ್ರು ಸೈನಿಕರ ಕತ್ತರಿಸಿದ ರುಂಡ ಮುಂಡದಿಂದ ಹರಿದ ರಕ್ತಸಮುದ್ರದಲ್ಲಿ ಜಿಗಣೆಯಾಗಿ ಬೆಳೆದಿದ್ದನಂತೆ.

ಸಾಹಿತ್ಯ ಚರಿತ್ರೆಕಾರರು ಹೇಳುವಂತೆ ಒಂಬತ್ತು, ಹತ್ತನೆಯ ಶತಮಾನವು ವೀರಯುಗ ಎಂತಲೇ ಕರೆಸಿಕೊಂಡು ಆಗಿನ ಎಲ್ಲ ಅರಸರಿಗೆ, ಪುರುಷ ಪರಾಕ್ರಮಿಗಳಿಗೆ ಯುದ್ಧರಂಗವೇ ವಿದ್ಯಾಭ್ಯಾಸದ ಅಂಗಳಗಳಾಗಿದ್ದವು ಎಂದಮೇಲೆ ಇದೇ ತೆರನಾದ ಕಾವ್ಯಗಳು ರನ್ನ, ಪೊನ್ನರಿಂದಲೂ ಬರೆಯಲ್ಪಟ್ಟವು. ಆದರೆ ಪಂಪ ಯುದ್ಧರಂಗವನ್ನೂ, ಸಂಸಾರವನ್ನೂ ತಿರಸ್ಕರಿಸಿ, ರಾಜಮಹಾರಾಜರನ್ನು ತಳ್ಳಿಹಾಕಿ ಮಾತನಾಡುವ ಸಂದರ್ಭವೂ ಅವನ ಕಾವ್ಯಗಳಲ್ಲಿದೆ. ಯಾವುದೇ ಅತಿರೇಕವೂ ನಿಲುಗಡೆಗೆ ಬಂದು ಅದು 'ಹೇಯಂ' ಅನ್ನಿಸಲೇಬೇಕಲ್ಲ!

ಇನ್ನು ಕನ್ನಡದ ಪ್ರಾಚೀನ ಶ್ರೇಷ್ಠ ಕವಿಗಳೆಲ್ಲ ತಂತಮ್ಮ ಜಾತಿ, ಧರ್ಮವನ್ನು ಮೀರಿದವರೇ ಎಂದರೆ ಈ ಸಂಗತಿ ಸಾಹಿತ್ಯ ಚರಿತ್ರೆ ಓದಿದವರಿಗೆಲ್ಲ ಗೊತ್ತೇ ಇದೆ. ವಚನಕಾರರು ಎಷ್ಟೇ ಗುಡಿಗುಂಡಾರ, ಜಾತಿ,ಧರ್ಮ ಮೀರಿ ಮಾತಾಡಿದವರಾದರೂ ಕಾಲ ಸಂದಂತೆ ಅವರೂ ಜಾತಿಸೀಮಿತದವರೇ ಆಗಿಬಿಟ್ಟಿರುತ್ತಾರೆ. ಹರಿಹರ ಪಂಪಾ ವಿರೂಪಾಕ್ಷನ ಅಸೀಮ ಭಕ್ತ. ಶಿವಭಕ್ತರ ಕಥನಗಳನ್ನು ಮಾತ್ರ ಹಾಡಿದವನು. ರಾಘವಾಂಕನಾದರೋ ಬದುಕಿದರೂ ಸತ್ತರೂ, ಸಿರಿ ಬಂದರೂ ಅದು ಹೋದರೂ ವಿರೂಪಾಕ್ಷನನ್ನು ಬಿಟ್ಟು ತನ್ನ ನಾಲಗೆಯಲ್ಲಿ ಅನ್ಯ ದೈವಗಳನ್ನು ಸ್ತುತಿಸಿದವನಲ್ಲ ಎನ್ನುತ್ತಾನೆ. ಇಷ್ಟಾಗಿ ಈತ ರಚಿಸಿದ ಹರಿಶ್ಚಂದ್ರ ಕಾವ್ಯವು ಹರಿಹರನ ರಗಳೆಗಳಂತೆ ಕನ್ನಡದ ಶ್ರೇಷ್ಠ ಕೃತಿ.

ಹದಿನೈದನೇ ಶತಮಾನದಲ್ಲಿ 'ಕರ್ಣಾಟಭಾರತ ಕಥಾಮಂಜರಿ'ಯನ್ನು ರಚಿಸಿದ ಕುಮಾರವ್ಯಾಸ ಶೈವಪಾರಮ್ಯ, ವಿಷ್ಣುಪಾರಮ್ಯವನ್ನು ಒಂದು ಮಾಡುತ್ತಾನಾದರೂ ಅಲ್ಲಲ್ಲಿ ದ್ವಿಜಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತಾನೆ. ಹೀಗಾಗಿ 'ಮನುಷ್ಯ ಜಾತಿ ತಾನೊಂದೇ ವಲಂ' ಎನ್ನುವ ಮಾತಿನ ಮೇಲುನೋಟದ ಅರ್ಥ ವಿಶ್ವಮಾನವ ಪ್ರಜ್ಞೆಯಂತೆ ತೋರಿ, ಅದರ ಹಿನ್ನೆಲೆಯಲ್ಲಿ ಜಾತಿ ಸಂಗತಿ ಹುದುಗಿರುತ್ತ. ನಮ್ಮ ಸಾಮಾಜಿಕ ಜಾತಿ ರಚನೆಗಳು ಪಾಠದಲ್ಲಿ, ಉಪನ್ಯಾಸಗಳಲ್ಲಿ, ಸಭೆ- ಸಮಾರಂಭಗಳಲ್ಲಿ ಪುನರಾವರ್ತನೆಯಾಗುತ್ತ ಪಂಪನ ವಾಕ್ಯದೊಡನೆ ಕೇಳಿ ಬರುತ್ತ, ಬದುಕಿನಲ್ಲಿ ಅದೇ ಜಾತಿಸಂಗತಿ ಬಲವಾಗಿ ಬೇರೂರಿದೆ ಎಂದು ಹೇಳದೆ ಗತ್ಯಂತರವಿಲ್ಲ.

●